<u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ</u>

ಸಿ.ಸಿ. ನಂಬ್ರಃ **439/ 2024**
ಸಿ.ಡಬ್ಲ್ಯೂ- **14**
ಪಿ.ಡಬ್ಲ್ಯೂ- **11**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಧರ ನಾಯಕ್ |
| ತಂದೆಯ ಹೆಸರು | : | ಪರಮೇಶ್ವರ ನಾಯಕ್ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಪಿ ಎಸ್ ಐ ಹರಿಹರ ಪೊಲೀಸ್ ಠಾಣೆ ಚಿಕ್ಕಮಗಳೂರು |
| ವಾಸ | : | ಚಿಕ್ಕಮಗಳೂರು |

ದಿನಾಂಕಃ 03-02-2026 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು 2019 ರಿಂದ 2023 ಜನವರಿಯವರೆಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕಃ 02-10-2022 ರಂದು ಠಾಣ ಪೊಲೀಸ್ ಪೇದೆ ಜಯರಾಮ ನಾಯಕ್ ರವರು ತಂದು ಹಾಜರು ಪಡಿಸಿದ ಹೇಳಿಕೆ ದೂರನ್ನು ಸ್ವೀಕರಿಸಿಕೊಂಡು ಅಪರಾಧ ಸಂಖ್ಯೆ 103/2022 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ದೂರು ಹಾಗೂ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಯವರಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.20 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 20(ಎ) ಎಂದು ಗುರುತಿಸಲಾಯಿತು.

ದಿನಾಂಕ 03-10-2022 ರಂದು ಪ್ರತ್ಯಕ್ಷ ಸಾಕ್ಷಿದಾರರಾದ ಕೃಷ್ಣಮೂರ್ತಿಯಮರ ಘಟನಾ ಸ್ಥಳ ತೋರಿಸಿದಂತೆ ಪಂಚಯಿತಿದಾರರಾದ ಕೃಷ್ಣ ಹಾಗೂ ಗಜೇಂದ್ರರವರ ಸಮಕ್ಷಮ ಪಂಚನಾಮೆಯನ್ನು

ಬೆಳಿಗ್ಗೆ 11 ರಿಂದ 11.45 ಗಂಟೆಯವರೆಗೆ ಪಂಚಾನಾಮೆಯನ್ನು ಸ್ಥಳದಲ್ಲಿ ತಯಾರಿಸಿ ನಕ್ಷೆ ಹಾಗೂ ಪೋಟೋವನ್ನು ಸ್ಥಳದಲ್ಲಿ ತೆಗೆದಿರುತ್ತೇನೆ. ಸಾಕ್ಷಿ ನಕ್ಷೆಯನ್ನು ನೋಡಿ ಗುರುತಿಸಿದ್ದು ನಿ.ಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 21(ಎ) ಎಂದು ಗುರುತಿಸಲಾಯಿತು. ಮಹಜರು ಹಾಗೂ ಪೋಟೋಗಳು ಈಗಾಗಲೇ ನಿ.ಪಿ.9 ಮತ್ತು 10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.9(ಸಿ) ಮತ್ತು 10(ಎ) ಎಂದು ಗುರುತಿಸಲಾಯಿತು.ಅದೇ ದಿನ ಕೃಷ್ಣಮೂರ್ತಿ, ಗಜೇಂದ್ರ, ಮಿತ್ಯಾಂತರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಅವರುಗಳು ತಮ್ಮ ಹೇಳಿಕೆಯಲ್ಲಿ ಕೆ ಎ 09 ಎಫ್ 5014 ಎಂಬ ಬಸ್ ಕೆ ಎ 20 ಇಸ್ 0505 ಎಂಬ ದ್ವಿ ಚಕ್ರ ವಾಹನಕ್ಕೆ ಶಂಕರನಾರಾಯಣ ಕಡೆಯಿಂದ ಸಿದ್ದಾಪುರ ಕಡೆಗೆ ಅತಿವೇಗ ಹಾಗೂ ಅಜಾಗರುಕತೆಯಿಂದ ಚಾಲನೆ ಮಾಡಿ ಬಲಕ್ಕೆ ಚಲಾಯಿಸಿ, ನಂತರ ಏಕಾಏಕಿ ಎಡಕ್ಕೆ ಚಲಾಯಿಸಿ ಬಸ್ ನ ಹಿಂಭಾಗ ಸದರಿ ದ್ವಿ ಚಕ್ರ ಕ್ಕೆ ಹೊಡೆದುದ್ವಿ ಚಕ್ರ ವಾಹನ ಸವಾರನಿಗೆ ಬಲಭುಜ ಹಾಗೂ ಬಲಕಾಲು ಹಾಗೂ ತಲೆಗೆ ಪೆಟ್ಟಾಗಿದೆ ಎಂದು ಹೇಳಿಕೆ ನೀಡಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರತಿ ಪ್ರಕರಣ ದಾಖಲಾಗಿದ್ದು ಆ ಪ್ರಕರಣದಲ್ಲಿ ದ್ವಿ ಚಕ್ರ ವಾಹನ ಹಾಗೂ ಬಸ್ ನ್ನು ವಶಪಡಿಸಿಕೊಂಡಿದ್ದು ಆ ದಿನ ಘಟಕಾ ವ್ಯವಸ್ಥಾಪಕರು ಕುಂದಾಪುರ ಘಟಕಾದವರಿಗೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಲಕ ಹಾಗೂ ನಿರ್ವಾಹಕರ ಬಗ್ಗೆ ಸಂಬಂಧಿಸಿದ ಅಧಿಕಾರ ಪತ್ರ ನೀಡುವಂತೆ ಕೋರಿಕೆಯನ್ನು ಸಲ್ಲಿಸಿಕೊಂಡಿರುತ್ತೇನೆ. ಅದೇ ದಿನ ಸದರಿ ಘಟಕಾ ವ್ಯವಸ್ಥಾಪಕರು ಆ ಬಗ್ಗೆ ಅಧಿಕಾರ ಪತ್ರ ಹಾಗೂ ದೃಡಿಕರಣ ಪತ್ರವನ್ನು ದಿನಾಂಕ 03-10-2022 ರ ಅರ್ಜಿಯೊಂದಿಗೆ ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಅಧಿಕಾರ ಪತ್ರ ಹಾಗೂ ದೃಡಿಕರಣ ಪತ್ರಗಳನ್ನು ಈಗಾಗಲೇ ನಿ.ಪಿ.13 ಹಾಗೂ 12 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.13(ಬಿ) ಹಾಗೂ 12(ಬಿ) ಎಂದು ಗುರುತಿಸಲಾಯಿತು. ದಿನಾಂಕ 03-10-2022 ರ ಅರ್ಜಿಯನ್ನು ನಿ.ಪಿ.22 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 22(ಎ) ಎಂದು ಗುರುತಿಸಲಾಯಿತು.

ದಿನಾಂಕ 04-10-2022 ರಂದು ಸದರಿ ಕೆ ಎಸ್ ಆರ್ ಟಿ ಸಿ ಬಸ್ ನ ಅಧಿಕಾರ ಪತ್ರ ಹೊಂದಿರುವ ಸುಧೀಂದ್ರ ವೈದ್ಯರವರಿಗೆ ಕಲಂ 133 ರಡಿಯಲ್ಲಿ ನಿ.ಪಿ.14 ರಂತೆ ನೋಟಿಸು ಜಾರಿ ಮಾಡಿ ಅದೇ ದಿನ ಸುಧೀಂದ್ರ ವೈದ್ಯ ಇವರು ಉತ್ತರವನ್ನು ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ನಿ.ಪಿ.14 ಮತ್ತು 15 ರ ಸಹಿಗಳನ್ನು ನಿ.ಪಿ.14(ಬಿ) ಮತ್ತು 15(ಬಿ) ಎಂದು ಗುರುತಿಸಿಕೊಂಡಿರುತ್ತಾರೆ.

ಅದೇ ದಿನ ಆರೋಪಿತರಾದ ವಿಜಯ್ ಕುಮಾರ್ ತೆಮಿನಾಡುರವರು ಠಾಣೆಗೆ ಹಾಜರಾಗಿದ್ದು ಆತನ ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ, ವಾಹನದ ಮಾಲೀಕನಿಂದ ಸೂಕ್ತ ಜಾಮೀನನ್ನು ಪಡೆದುಕೊಂಡು ಬಿಡುಗಡೆ

ಗೊಳಿಸಿರುತ್ತೇನೆ. ಸಾಕ್ಷಿ ಇಂಡಿಮೇನಿಟಿ ಬಾಂಡ್ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.23 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 23(ಎ) ಎಂದು ಗುರುತಿಸಲಾಯಿತು.

ದಿನಾಂಕ 04-10-2022 ರಂದು ಉಡುಪಿ ಆದರ್ಶ ಆಸ್ಪತ್ರೆಯಿಂದ ಗಾಯದ ದೃಡಿಕೃತ ಪತ್ರವನ್ನು ನೀಡುವಂತೆ ಕೋರಿಕೆಯನ್ನು ಸಲ್ಲಿಸಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರ ಕಡತದಲ್ಲಿ ಇಲ್ಲದೇ ಇರುವುದರಿಂದ ಗುರುತಿಸಿರುವುದಿಲ್ಲ. ದಿನಾಂಕ 29-10-2022 ರಂದು ಉಡುಪಿ ಆದರ್ಶ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಹಾಗೂ ಮೋಟಾರು ವಾಹನ ನೀರಿಕ್ಷಕರಿಂದ ವಾಹನ ಪರಿಶೀಲನಾ ವರದಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರ ಹಾಗೂ ವರದಿಯನ್ನು ನಿ.ಪಿ. 18, 16 ಮತ್ತು 17 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ಕ್ರಮಾಗಿ 18(ಬಿ), 16(ಬಿ) ಮತ್ತು 17(ಬಿ) ಎಂದು ಗುರುತಿಸಲಾಯಿತು.

ನಂತರ ಠಾಣಾ ಹೆಚ್ ಸಿ ಗೋಪಾಲರವರಿಂದ 65(ಬಿ) ಸರ್ಟಿಫಿಕೇಟ್ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ 65(ಬಿ) ಸರ್ಟಿಫಿಕೇಟ್ ನಿ.ಪಿ.19 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿ.ಪಿ. 19(ಬಿ) ಎಂದು ಗುರುತಿಸಲಾಯಿತು. ಅದೇ ದಿನ ನ್ಯಾಯಲಯಕ್ಕೆ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ</u>

1. ಪ್ರತಿ ದೂರಿನಲ್ಲಿ ಬೈಕ್ ನ ಸವಾರನೇ ಕೆ ಎಸ್ ಆರ್ ಟಿ ಸಿ ಗೆ ಡಿಕ್ಕಿ ಹೊಡೆದಿರುತ್ತಾನೆ ಎಂದು ದೂರಲಾಗಿತ್ತು. ಕೆ ಎಸ್ ಆರ್ ಟಿ ಸಿ ಬಸ್ ಗೆ ಯಾವುದೇ ಜಖಂ ಗಳು ಆಗಿರುವುದಿಲ್ಲ, ಗಿರಿದ ಗುರುತುಗಳು ಆಗಿದ್ದವು. ಆ ಗಿರಿದ ಗುರುತು ಆಗಿದ್ದು ಬಸ್ ನ ಬಲಭಾಗದ ಹಿಂದಿನ ಚಕ್ರದ ಬಳಿ ಎಂದರೆ ಸರಿ. ಬಸ್ ನ ಎದುರು ಭಾಗಕ್ಕೆ ಹಾಗೂ ಮುಂಭಾಗದ ಬಲಭಾಗಕ್ಕೆ ಯಾವುದೇ ಜಖಂಗಳು ಆಗಿರಲಿಲ್ಲ ಎಂದರೆ ಸರಿ. ಗಿರಿದ ಗುರುತು ದ್ವಿ ಚಕ್ರ ವಾಹನದಿಂದ ಸಂಭವಿಸಿರುತ್ತದೆ.

2. ಪ್ರತಿದೂರು ಯಾವ ದಿನಾಂಕ ಹಾಗೂ ಎಷ್ಟು ಗಂಟೆಗೆ ದಾಖಲಾಗಿರುತ್ತದೆ ಎಂದು ನೆನಪಿರುವುದಿಲ್ಲ. ಪ್ರತಿ ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ನೆನಪಿರುವುದಿಲ್ಲ. ಪ್ರತಿ ದೂರಿನ ಬಗ್ಗೆ ತೀವ್ರ ನಿಲರ್ಕ್ಷ ವಹಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರತಿದೂರಿನ ಸತ್ಯಾಂಶವನ್ನು ತಿಳಿದುಕೊಳ್ಳಲು ಯಾವುದೇ ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಬಸ್ ತುಲನಾತ್ಮಕವಾಗಿ ದೊಡ್ಡದಿದ್ದು ದ್ವಿ ಚಕ್ರ ವಾಹನದ ಚಾಲಕನಿಗೆ ಪೆಟ್ಟಾಗಿದೆ ಎಂಬ ಎರಡು ಅಂಶಗಳನ್ನು ಗಮನಿಸಿ ಅದರಿಂದ ಪ್ರಭಾವಿತನಾಗಿರುತ್ತೇನೆ ಎಂದರೆ ಸರಿಯಲ್ಲ.

3. ಘಟನೆ ಆದಾಗ ಕೆ ಎಸ್ ಆರ್ ಟಿ ಸಿ ನಲ್ಲಿ ಪ್ರಯಾಣಿಕರು ಇದ್ದರು. ಆ ಬಸ್ ನಲ್ಲಿ ಎಷ್ಟು ಜನ ಇದ್ದರು ಎಂಬ ಬಗ್ಗೆ ನನಗೆ ಮಾಹಿತಿ ಲಭ್ಯ ಆಗಿರುವುದಿಲ್ಲ. ಈ ಪ್ರಕರಣದಲ್ಲಿ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಯಾವುದೇ ಪ್ರಯಾಣಿಕರನ್ನು ವಿಚಾರಿಸಿರುವುದಿಲ್ಲ ಎಂದರೆ ಸಾಕ್ಷಿ ಅಪಘಾತ ಆದ ತಕ್ಷಣ ಆ ಪ್ರಯಾಣಿಕರನ್ನು ಬೇರೆ ಬಸ್ ಗೆ ಹತ್ತಿಸಿ ಕಳುಹಿಸಿದ್ದರಿಂದ ವಿಚಾರಣೆಗೆ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಯಾವುದೇ ಪ್ರಯಾಣಿಕರು ಸಹ ಲಭ್ಯ ಇರಲಿಲ್ಲ ಎಂದು ನುಡಿಯುತ್ತಾರೆ.

4. ನಾನು ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ನಿರ್ವಾಹಕರನ್ನು ಹಾಗೂ ಪ್ರತ್ಯಕ್ಷದಾರರನ್ನು ಹೆಸರಿಸಿರುತ್ತೇನೆ. ಬಸ್ ನ ನಿರ್ವಾಹಕ ನಮ್ಮ ಬಸ್ ನ ಚಾಲಕನದ್ದು ಯಾವುದೇ ತಪ್ಪು ಇರುವುದಿಲ್ಲ , ದ್ವಿ ಚಕ್ರ ವಾಹನದ ಚಾಲಕ ಬಸ್ ಹಿಂಭಾಕ್ಕೆ ತಾಗಿಸಿಕೊಂಡಿರುತ್ತಾನೆ ಎಂದು ತನ್ನ ಹೇಳಿಕೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆತ ತನ್ನ ಹೇಳಿಕೆಯಲ್ಲಿ ಬಸ್ ಸಾಧರಣ ವೇಗದಲ್ಲಿ ಹೋಗುತ್ತಿದ್ದು ದ್ವಿ ಚಕ್ರ ವಾಹನದ ಚಾಲಕ ದುಡುಕಿನಿಂದ ಹಾಗೂ ಅಜಾಗರುಕತೆಯಿಂದ ಬಸ್ ಗೆ ತಾಗಿಸಿಕೊಂಡಿರುತ್ತಾನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಿರ್ವಾಹಕನ ಹೇಳಿಕೆಯನ್ನು ಆತನ ಹೇಳಿಕೆಯನ್ನು ಬರೆದುಕೊಳ್ಳದೇ ಪ್ರಕರಣಕ್ಕೆ ಪೂರಕವಾಗಿ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ಪ್ರತ್ಯಕ್ಷ ಸಾಕ್ಷಿ ಎಂದರೆ ಸಾಕ್ಷಿ ಕೃಷ್ಣ ಮೂರ್ತಿ ಹಾಗೂ ಗಜೇಂದ್ರ ಮಿತ್ಯ ರವರು ಈ ಅಪಘಾತ ಪ್ರಕರಣದ ಪ್ರತ್ಯಕ್ಷ ಸಾಕ್ಷಿಗಳು. ಅವರು ಇಬ್ಬರು ಬೇರೆ ಬೇರೆ ವಾಹನದಲ್ಲಿ ಚಲಾಯಿಸುತ್ತಿದ್ದರು. ಆ ಪ್ರತ್ಯಕ್ಷ ದರ್ಶಿಗಳ ಪೈಕಿ ಕೃಷ್ಣ ಮೂರ್ತಿ ಬಸ್ ನ ಹಿಂಭಾಗದಲ್ಲಿ ಚಲಾಯಿಸುತ್ತಿದ್ದರು. ಗಜೇಂದ್ರ ಮಿತ್ಯಾ ರವರು ದ್ವಿ ಚಕ್ರ ವಾಹನದ ಹಿಂಭಾಗ ಚಲಾಯಿಸುತ್ತಿದ್ದರು. ದ್ವಿ ಚಕ್ರ ವಾಹನದ ಚಾಲಕನ ಚಾಲನಾ ಅನುಜ್ಞಾ ಪತ್ರ ನಾನು ಪಡೆದಿರುವುದಿಲ್ಲ.

6. ಸ್ಥಳ ಪಂಚನಾಮೆಯನ್ನು ಒಂದು ದಿನದ ನಂತರ ತಯಾರಿಸಿರುತ್ತೇನೆ. ಸದರಿ ರಸ್ತೆಯ ಅಗಲ 14 ಅಡಿ ಅಗಲ ಇರುತ್ತದೆ. ಮಹಜರನ್ನು ಠಾಣೆಯಲ್ಲಿ ಕುಳಿತು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರಸ್ತೆಯಲ್ಲಿ ಎರಡು ಕಡೆಯಲ್ಲಿ ವಾಹನಗಳು ಸಂಚರಿಸುತ್ತಿರುತ್ತವೆ ಎಂದರೆ ಸರಿ. ದ್ವಿ ಚಕ್ರ ವಾಹನ ಸವಾರನ ಶಿರಸ್ತ್ರಾಣವನ್ನು ನಾನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಅಪಘಾತದ ಸಂದರ್ಭದಲ್ಲಿ ದ್ವಿ ಚಕ್ರ ವಾಹನದ ಸವಾರ ಶಿರಸ್ತ್ರಾಣ ಧರಿಸಿದ್ದ ಬಗ್ಗೆ ಮಾಹಿತಿ ಇರುವುದಿಲ್ಲ. ಎಲ್ಲಾ ಸಾಕ್ಷಿದಾರರ ಹೇಳಿಕೆಯನ್ನು ಅವರುಗಳನ್ನು ವಿಚಾರಿಸಿದೇ ತನಿಖೆಗೆ ಅನುಗುಣವಾಗಿ ನಾನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ನನ್ನ ತನಿಖೆಯಲ್ಲಿ ಆರೋಪಿ ಚಾಲಕನ ತಪ್ಪು ಇಲ್ಲ ಎಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿ ದೂರಿನಲ್ಲಿ ದ್ವಿಚಕ್ರ ವಾಹನದ ಚಾಲಕನ ತಪ್ಪು ಎಂದು ನಮಗೆ ಮನವರಿಕೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕಷ್ಟು ಸಾಕ್ಷಿದಾರ ಇಲ್ಲದೇ ಇದ್ದರೂ ಸಹ ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ